**<u>ದಿನಾಂಕಃ 28–12–2022 ರಂದು ಪಿ.ಡಬ್ಲೂ. 26 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಎನ್.ಟಿ.ಆರ್. ವಕೀಲರಿಂದಃ</u>**

**87.** ನಿಪಿ–**11** ಸೊರ್ಸ್ ವರದಿಯನ್ನು ನಾನು ತಯಾರಿಸಿಲ್ಲ. ನಾನು ಸೊರ್ಸ್ ವರದಿಯನ್ನು ಪರಿಶೀಲಸಿ ನೋಡಿದ್ದೆನು. ನಿಪಿ–**11** ನ್ನು ತಯಾರಿಸುವಾಗ ಶ್ರೀ ಬಾರ್ಕೇರ್**,** ಡಿವೈ.ಎಸ್.ಪಿ. ಇವರು ಆಯಾ ಕಛೇರಿಗಳಿಗೆ ಬೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದರೇ ಇಲ್ಲವೇ ಎಂಬ ಬಗ್ಗೆ ನಾನು ವಿಚಾರಣೆ ಮಾಡಲಿಲ್ಲ. ಅವರು ಸೊರ್ಸ್ ವರದಿಯಲ್ಲಿ ಆರೋಪಿತರು ಅವರ ಆದಾಯಕ್ಕಿಂತ ಶೇ **92.71** ರಷ್ಟು ಅಸಮತೋಲನ ಆದಾಯವನ್ನು

ಹೊಂದಿರುತ್ತಾರೆಂದು ಮಾಹಿತಿ ಸಂಗ್ರಹಿಸಿದ್ದು ನಾನು ತನಿಖೆಯನ್ನು ಮಾಡಿದಾಗ ಅದಕ್ಕಿಂತಲೂ ಹೆಚ್ಚು ಅಸಮತೋಲನ ಆದಾಯವನ್ನು ಹೊಂದಿದ್ದಾರೆಂದು ತನಿಖೆಯಲ್ಲಿ ಕಂಡುಬಂದಿತ್ತು.

**88**. ನಮ್ಮ ಲೋಕಾಯುಕ್ತ ಕಛೇರಿಯವರು ಗೃಹ ಕೃತ್ಯಗಳಿಗಾಗಿ ಖರ್ಚನ್ನು **19** ಪ್ಯಾರಾಮೀಟರ್ ಗಳಲ್ಲಿ ಪರಿಗಣಿಸಬೇಕೆಂದು ನಿಯಮಾವಳಿಗಳನ್ನು ನೀಡಿದ್ದಾರೆಂದರೆ ನಿಜ. ಅವುಗಳಲ್ಲಿ ವೆಜ್, ನಾನ್ ವೆಜ್, ಬ್ರೆವರೇಜ್ ಇತ್ಯಾದಿಗಳು ಎಲ್ಲವೂ ಬರುತ್ತವೆ ಎಂದರೆ ನಿಜ. ಆ **19** ಪ್ಯಾರಾಮೀಟರ್ ಪ್ರಕಾರ ತನಿಖೆ ಮಾಡದೇ ನಾವು ಮಾಹಿತಿಯನ್ನು ಕಳುಹಿಸಿಕೊಡುತ್ತೇವೆ ಎನ್ನುವುದು ಸರಿಯಲ್ಲ. ಮನೆಯಲ್ಲಿ ಕಾಳು ಕಡಿ ಬೆಳೆದಿದ್ದರೆ ಖರ್ಚು ಕಡಿಮೆ ಬರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಹೇಳುತ್ತಾರೆ ನಾವು ಆಹಾರ ಪದಾರ್ಥದ ಕನಿಷ್ಟ ಮೊತ್ತದ ರೇಟನ್ನು ಲೆಕ್ಕ ಹಾಕುವುದರಿಂದ ಅದರೊಳಗೆ ಆ ಖರ್ಚು ಬರುತ್ತದೆ.

**89**. ಕಾರ್ ನಂ.ಕೆಎ**–16–**ಎಂ**–6346** ಇದಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮೊತ್ತದಲ್ಲಿ ಖರ್ಚನ್ನು ತೋರಿಸಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ ವಾಹನ ಪರಿವೀಕ್ಷಣಾ ಅಧಿಕಾರಿಗೆ ಪತ್ರ ಬರೆದು ಅವರಿಂದ ವರದಿ ತೆಗೆದುಕೊಂಡು ಅದನ್ನು ಖರ್ಚಿನಲ್ಲಿ ಅಳವಡಿಸಿದ್ದೇನೆ. ನಾನು ಗಾಡಿ ಸಂ.ಕೆಎ**–16–**ಡಬ್ಲ್ಯೂ**–8697** ಮತ್ತು ಕೆಎ**–02–**ಇಡಿ**–8896** ಇವುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಖರ್ಚನ್ನು ತೋರಿಸಿದ್ದೇನೆ ಎನ್ನುವುದು ಸರಿಯಲ್ಲ. ವಾಹನ ಪರಿವೀಕ್ಷಣಾ ಅಧಿಕಾರಿಗಳಿಗೆ ಭಯ ಹಾಕಿ ಹೆಚ್ಚಿನ ಮಟ್ಟದಲ್ಲಿ ಹಣವನ್ನು ತೋರಿಸಿ ಅವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ ಎನ್ನುವುದು ಸರಿಯಲ್ಲ.

**90**. ಹೂವಿನಹೊಳೆ ಗ್ರಾಮದ ಸರ್ವೆ ನಂ.**62/2** ಕ್ಕೆ ಸಂಬಂಧಿಸಿದಂತೆ ಡ್ರಿಪ್ ಇರಿಗೇಶನ್, ಬೋರ್ ವೆಲ್ ಇದರ ಖರ್ಚು ರಾಮಣ್ಣ ಮತ್ತು ದ್ಯಾಮಣ್ಣ ಇವರ ಲೆಕ್ಕಕ್ಕೆ ಸೇರಬೇಕು

ಎಂದರೆ ಸರಿಯಲ್ಲ. ರಾಮಣ್ಣ ಮತ್ತು ದ್ಯಾಮಣ್ಣ ಇವರು ಬಿಪಿಎಲ್ ಕಾರ್ಡನ್ನು ಹೊಂದಿದ್ದಾರೆ. ಮತ್ತು ಅವರು ಆ ಜಮೀನನ್ನು **1** ನೇ ಆರೋಪಿಗೆ ದಾನಪತ್ರದ ಮೂಲಕ ಪರಬಾರೆ ಮಾಡಿದ್ದಾರೆಂದು ದಾಖಲೆಗಳನ್ನು ಹೊಂದಿದ್ದಾರೆ. ನಾನು ಬಿಪಿಎಲ್ ಕಾರ್ಡನ್ನು ಹಾಜರು ಮಾಡಿದ್ದೇನೆ. ಬಿಪಿಎಲ್ ಕಾರ್ಡನ್ನು ಹೊಂದಲು ನಿಗದಿತ ಪ್ರಮಾಣದ ಆಸ್ತಿಗಳು ಇರಬೇಕು ಎಂದು ನಿಯಮಾವಳಿ ಇರುತ್ತದೆ. ಅವರ ಬಿಪಿಎಲ್ ಕಾರ್ಡ್ ರದ್ದತಿಗೆ ನಾನು ಯಾವುದೇ ಅರ್ಜಿಯನ್ನು ಕೊಡಲಿಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಅದು ನನಗೆ ಸಂಬಂಧಿಸಿದ್ದು ಅಲ್ಲ.

**91**. **2** ನೇ ಆರೋಪಿ ಯಂಗಮ್ಮನಕಟ್ಟೆಯಲ್ಲಿರುವ ಸೈಟನ್ನು ಖರೀದಿಸಲು ಮೇಲಾಧಿಕಾರಿಗಳಿಂದ ಅನುಮತಿ ಪಡೆದಿದ್ದರು ಎನ್ನುವುದು ಸರಿಯಲ್ಲ. ಆದರೆ ಅದನ್ನು ಖರೀದಿಸಿದ ಬಗ್ಗೆ ಆಸ್ತಿ ಮತ್ತು ದಾಯಿತ್ವ ದಾಖಲೆಯಲ್ಲಿ ನಮೂದು ಮಾಡಿರುತ್ತಾರೆ. 2 ನೇ ಆರೋಪಿ ಆ ಸ್ವತ್ತನ್ನು ಖರೀದಿಸಲು ಅನುಮತಿ ಪತ್ರ ಪಡೆದಿದ್ದು ಅದನ್ನು ನನ್ನ ಮುಂದೆ ಹಾಜರುಪಡಿಸಿದ್ದರು ಎನ್ನುವುದು ಸರಿಯಲ್ಲ.

**92**. ಇಬ್ಬರೂ ಆರೋಪಿತರು ತಮ್ಮ ಹೆಸರಿನಲ್ಲಿ ಹೊಂದಿದ್ದ ವಿವಿಧ ಬ್ಯಾಂಕುಗಳಲ್ಲಿಯ ಉಳಿತಾಯ ಖಾತೆಗಳಲ್ಲಿ ಬಂದ ಬಡ್ಡಿ ಮೊತ್ತವನ್ನು ನಾನು ಪರಿಗಣಿಸಿಲ್ಲ ಎನ್ನುವುದು ಸರಿಯಲ್ಲ. ಗೃಹ ಬಳಕೆಯ ವಸ್ತುಗಳ ಮೌಲ್ಯವನ್ನು ರೂ.**8,61,221/–** ಎಂದು ನಾನು ಹೆಚ್ಚಿನ ಮಟ್ಟದಲ್ಲಿ ತೋರಿಸಿರುತ್ತೇನೆ ಎನ್ನುವುದು ಸರಿಯಲ್ಲ. ಬಂಗಾರದ ಆಭರಣಗಳ ಮತ್ತು ಬೆಳ್ಳಿಯ ವಸ್ತುಗಳ ಬೆಲೆಯನ್ನು ಸಹ ಹೆಚ್ಚಿನ ಮಟ್ಟದಲ್ಲಿ ತೋರಿಸಿರುತ್ತೇನೆ ಎನ್ನುವುದು ಸರಿಯಲ್ಲ. ಅವುಗಳ ದಾಖಲೆಯನ್ನು ಆರೋಪಿತರೇ ಒದಗಿಸಿದ್ದರು. ಅವರು ಯಾವುದೇ ದಾಖಲೆಗಳನ್ನು ಒದಗಿಸಿರಲಿಲ್ಲ ಎನ್ನುವುದು ಸರಿಯಲ್ಲ. ಕೆಎ–**16**–ಎಂ–**6346** ಹ್ಯೂಂಡೈ ಕಾರನ್ನು ಕಂತಿನ ಮೇಲೆ ಖರೀದಿಸಿದ್ದರೂ ಸಹ ನಾನು ಅದನ್ನು ಪರಿಗಣಿಸಿಲ್ಲ ಎನ್ನುವುದು ಸರಿಯಲ್ಲ. ಅವರು ಕಟ್ಟಿದ ಕಂತುಗಳ ಮೊತ್ತವನ್ನು ಪರಿಗಣಿಸಿದ್ದೇನೆ. ಆರೋಪಿತರು ವಿವಿಧ

ಬ್ಯಾಂಕುಗಳಿಂದ ಸಾಲ ತೆಗೆದುಕೊಂಡಿದ್ದು ಅದನ್ನು ನಾನು ಅವರ ಆದಾಯದಲ್ಲಿ ಪರಿಗಣಿಸಿಲ್ಲ ಎನ್ನುವುದು ಸರಿಯಲ್ಲ.

**93**. ಈಶ್ವರಗೆರೆಯಲ್ಲಿರುವ ಸರ್ವೆ ನಂ.**126/4** ಕ್ಕೆ ಸಂಬಂಧಿಸಿದಂತೆ ತಂತಿಬೇಲಿ ಮತ್ತು ಬೋರ್ ವೆಲ್ ಖರ್ಚಿನ ಬಾಬ್ತು ಆರೋಪಿತರು ಯಾವುದೇ ಹಣವನ್ನು ಖರ್ಚು ಮಾಡಿರದೇ ಇದ್ದರೂ ಸಹ ರೂ.**1,37,465/–**ಯನ್ನು ಖರ್ಚಿನ ಬಾಬ್ತು ತಪ್ಪಾಗಿ ತೋರಿಸಿರುತ್ತೇನೆ ಎನ್ನುವುದು ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರುತ್ತಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿತ್ರದುರ್ಗ